# ಬಾಂಧವ್ಯದ ಹುಡುಕಾಟ

ನಮ್ಮ ಅನುಭವವನ್ನು ಹೇಳುವ ಪರಿ ಒಂದು. ಅದನ್ನೊಂದು ಸಿದ್ಧಾಂತವಾಗಿ ರೂಪಿಸುವ ಪರಿ ಇನ್ನೊಂದು. ದೇವರು ಸರ್ವವ್ಯಾಪಿ ಎನ್ನುವ ಮಾತು ಬಹುವಾಗಿ ಒಂದು ಸಿದ್ಧಾಂತದ ಮಾತೇ ಸರಿ... ಸಿದ್ಧಾಂತ ತಪ್ಪೆಂದಲ್ಲ. ಆದರೆ ಮಾತು ಸಿದ್ಧಾಂತವಾದಾಗ ಅದು ಬೌದ್ಧಿಕವಾದ ಒಂದು ಪ್ರಮೇಯವಾಗಿ, ಅದನ್ನು ಕುರಿತಾದ ಪರ– ವಿರೋಧಗಳ ಚರ್ಚೆಯನ್ನೆಬ್ಬಿಸಿ, ಬೌದ್ಧಿಕವಾದ ಮಿತಿಯಲ್ಲಿಯೇ ನಿಂತುಬಿಡುವ ಸಂಭವವೇ ಹೆಚ್ಚು. ಚರ್ಚೆ ಬೇಡವೆಂದೂ ಅಲ್ಲ. ಬೌದ್ಧಿಕತೆ ತಪ್ಪೆಂದೂ ಅಲ್ಲ. ಆದರೆ ಅನುಭವದ ಮಾತಿಗೆ ಇರುವ ಕಾವು, ಕಸುವು, ರಸಾನುಭವವನ್ನು ಉಂಟುಮಾಡುವ ಸಾಮರ್ಥ್ಯ, ಮರ್ಮವನ್ನು ಮುಟ್ಟಿ ನಮ್ಮನ್ನು ಅಲುಗಾಡಿಸುವ ಶಕ್ತಿ– ಬರಿಯ ಸಿದ್ಧಾಂತದ ಮಾತುಗಳಿಗೆ ಇಲ್ಲವೆಂದಷ್ಟೇ ಅಭಿಪ್ರಾಯ.

ಅಕ್ಕಮಹಾದೇವಿಯ ಅತ್ಯಂತ ಪರಿಚಿತವಾದ ಈ ವಚನವನ್ನು ಕೇಳಿಸಿಕೊಳ್ಳೋಣ.

‘ಚಿಲಿಪಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೇ ನೀವು ಕಾಣಿರೇ
ಸರವೆತ್ತಿ ಪಾಡುವ ಕೋಗಿಲೆಗಳಿರಾ ನೀವು ಕಾಣಿರೇ ನೀವು ಕಾಣಿರೇ
ಎರಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೇ ನೀವು ಕಾಣಿರೇ
ಕೊಳನ ತಡಿಯೊಳಾಡುವ ಹಂಸಗಳಿರಾ ನೀವು ಕಾಣಿರೇ ನೀವು ಕಾಣಿರೇ
ಗಿರಿಗಹ್ವರದೊಳಾಡುವ ನವಿಲುಗಳಿರಾ ನೀವು ಕಾಣಿರೇ ನೀವು ಕಾಣಿರೇ
ಚೆನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ’

ಐಗಳ ಮಠದಲ್ಲಿ ಮಕ್ಕಳು ಚಿಲಿಪಿಲಿ ಎಂದು ಓದುವುದನ್ನು ಕೇಳಿರುವ ಅಕ್ಕ, ಆ ಅನುಭವವನ್ನು ನೆನೆಯುತ್ತ ಗಿಳಿಗಳ ಚಿಲಿಪಿಲಿಯನ್ನು ಕೇಳುತ್ತಿದ್ದಾಳೆ. ಗಿಳಿಗಳು ಕೂಡ ಏನನ್ನೋ ಓದುತ್ತಿವೆ. ಆ ಓದು ಚೆನ್ನಮಲ್ಲಿಕಾರ್ಜುನನ ಕುರಿತಂತೇ ಇರಬೇಕು ಎಂದೂಹಿಸುತ್ತಾಳೆ ಅಕ್ಕ. ಓದುವುದೆಂದರೆ ಅದೊಂದು ಅರಿವಿನ ಹುಡುಕಾಟವಲ್ಲವೆ? ಎಲ್ಲ ಜೀವಜಾತವೂ ತಮಗೆ ತಿಳಿದೋ ತಿಳಿಯದೆಯೋ ಒಂದು ಅರಿವಿನ ಹುಡುಕಾಟದಲ್ಲಿವೆಯಾಗಿ ಅವೂ ತಮ್ಮದೇ ಆದ ರೀತಿಯಲ್ಲಿ ಓದುತ್ತಿವೆ. ಚೆನ್ನಮಲ್ಲಿಕಾರ್ಜುನ ತಾನು ಅಡಗಿದಂತೆ ಇದ್ದು ಎಲ್ಲ ಜೀವಗಳೂ ತನ್ನನ್ನು ಹುಡುಕಲು ಹಚ್ಚಿದ್ದಾನೆ. ಎಲ್ಲ ಜೀವಿಗಳಿಂದ ಹುಡುಕಿಸಿಕೊಳ್ಳುವಂತೆ ಇರುವವನು ಸರ್ವವ್ಯಾಪಿಯೇ ಇರಬೇಕು!

ಕೋಗಿಲೆಗಳು ದನಿಯೆತ್ತಿ ಹಾಡುತ್ತಿವೆ. ಈ ಕೋಗಿಲೆಗಳು ಯಾರನ್ನೋ ಕರೆಯುತ್ತಿರುವಂತಿವೆ. ಹಾಡೆಂದರೆ ಒಂದು ಕರೆ, ಒಂದು ಹಂಬಲ, ಒಂದು ತೋಡಿಕೊಳ್ಳುವಿಕೆ. ಅಂದರೆ ತಮ್ಮ ಕರೆಗೆ ಓಗೊಡುವವನೊಬ್ಬ, ತಮ್ಮ ಹಾಡನ್ನೂ ಕೇಳಿಸಿಕೊಳ್ಳಬಲ್ಲವನೊಬ್ಬ, ತಮ್ಮ ಹೃದಯದ ತೋಡಿಕೊಳ್ಳುವಿಕೆಯನ್ನು ಒಪ್ಪಿಸಿಕೊಳ್ಳಬಲ್ಲವನೊಬ್ಬನಿದ್ದಾನೆ ಎಂದು ಈ ಕೋಗಿಲೆಗಳಿಗೆ ಅದು ಹೇಗೋ ತಿಳಿದಿರಬೇಕು! ಇವು ಅವನನ್ನೇ ಕರೆಯುತ್ತಿವೆ. ಹೂವಿಂದ ಹೂವಿಗೆ ಹಾರುತ್ತ ಮಧುರ ಮಕರಂದ ಪಾನ ಮಾಡುತ್ತ ತಾವೂ ಒಂದು ಹೂವಿನಂತೆಯೇ ಇರುವ ರಸಿಕ ತುಂಬಿಗಳಿಗೆ, ಸದಾ ತುಂಬಿಯೂ ತುಳುಕದೆ ಇರುವ ಚೆನ್ನಮಲ್ಲಿಕಾರ್ಜುನನ ಗುಟ್ಟು ಗೊತ್ತಿರಬೇಕು! ಹಂಸೆಗಳು ಕೊಳವ ತಿಳಿನೀರಿನಲ್ಲಿ ತಟಾಕದಲ್ಲಿ ಆಡುತ್ತಿವೆ. ಚೆನ್ನನ ಹೆಜ್ಜೆ ಗುರುತುಗಳನ್ನು ಇವು ಕಂಡಿವೆಯೇ! ಬೆಟ್ಟದಲ್ಲಿ ನಲಿವ ನವಿಲುಗಳಿಗೆ ಅಲ್ಲೆಲ್ಲಾದರೂ ಚೆನ್ನ ಸುಳಿದುದು, ಅವು ಎತ್ತರದಲ್ಲಿ ಇದ್ದುದರಿಂದ, ಕಂಡಿರಬಹುದಲ್ಲವೆ! – ಎನ್ನುತ್ತಾಳೆ ಅಕ್ಕ.

ನಮ್ಮೊಳಗೆ ಉತ್ಕಟವಾದೊಂದು ಹಂಬಲವಿದ್ದಾಗ ನಮ್ಮ ಮೈ–ಮನಗಳ ಎಲ್ಲ ಶಕ್ತಿಗಳೂ ಈ ಹಂಬಲವನ್ನು ಅನುಸರಿಸುತ್ತಿರುವಂತೆ ತೋರಿಸುತ್ತದೆ. ಹಸಿವು– ಬಾಯಾರಿಕೆಗಳೂ ಮರೆತು ಹೋಗುವಂತೆ ನಾವು ಯಾವುದೊಂದು ಭಾವದಲ್ಲಿ ಮುಳುಗಿರುವುದು ಎಲ್ಲರ ಅನುಭವವಾಗಿದೆ. ಇಂಥ ಅನುಭವ ಎಂದಾದರೊಮ್ಮೆ ಎಲ್ಲರಿಗೂ ಆಗಿರುತ್ತದೆ. ಹಾಗೆ ಚೆನ್ನಮಲ್ಲಿಕಾರ್ಜುನನ ಹುಡುಕಾಟದ ತೀವ್ರತೆಯಲ್ಲಿ ಅಕ್ಕನಿಗೆ ಕೂಡ ಜೀವಜಾತವೆಲ್ಲ ತನ್ನಂತೆ ಹುಡುಕುತ್ತಿವೆ ಎಂದು ಅನ್ನಿಸುತ್ತದೆ. ಎಲ್ಲ ಹುಡುಕಾಟವೂ ಯಾವುದೋ ಮೂಲ ಹುಡುಕಾಟದ ಪ್ರತಿಫಲನಗಳೇ ಆಗಿವೆ ಎಂದುಕೊಂಡರೆ ಅಕ್ಕನ ಅನಿಸಿಕೆ ನಿಜವೂ ಹೌದು. ಅಂದಾಗ, ಎಲ್ಲ ಹುಡುಕಾಟಗಳೂ ಒಂದಾದವು. ಒಂದಾಗಿ ಮೇಲ್ನೋಟಕ್ಕೆ ಚಂಚಲವಾಗಿ ಕಾಣುವ ಜೀವಜಾತದ ಭಿನ್ನ ಭಿನ್ನ ಚಟುವಟಿಕೆಗಳೆಲ್ಲವೂ– ಓದುವ, ಹಾಡುವ, ಆಡುವ, ಈಸುವ, ನಲಿಯುವ ಈ ಚಟುವಟಿಕೆಗಳೆಲ್ಲವೂ– ಒಳಗಿನಿಂದ ನೋಡಿದಾಗ ಎಲ್ಲವೂ ಒಂದೇ ಹುಡುಕಾಟದ ಅನೇಕ ಮುಖಗಳಂತೆ ಅರಿವಾಯಿತು. ಎಲ್ಲ ಚಟುವಟಿಕೆಗಳೂ ಒಂದರೊಡನೆ ಇನ್ನೊಂದು ಸಂಬಂಧ ಹೊಂದಿದ ಅರಿವಾಯಿತು. ಎಲ್ಲ ಕರಣ ಚೇಷ್ಟೆಗಳೂ ಪರಸ್ಪರ ಐಕ್ಯಗೊಂಡವು. ಸರ್ವವ್ಯಾಪಿಯ ಹುಡುಕಾಟಕ್ಕೆ ಸರ್ವಕರ್ಮಗಳೂ ಸಜ್ಜಾದವು. ಗಿಳಿ, ಕೋಗಿಲೆ, ತುಂಬಿ, ಹಂಸ, ನವಿಲುಗಳೊಡನೆ ಅಕ್ಕ ಆಡುವ ಮಾತಿನಲ್ಲಿ ಒಂದು ಅನುಪಮವಾದ ಆರ್ತತೆ ಇದೆ. ನೀವೆಲ್ಲರೂ ನನ್ನ ಬಂಧುಗಳೆಂದ ಭಾವವಿದೆ. ಅಂದರೆ ಸರ್ವವ್ಯಾಪಿಯ ಹುಡುಕಾಟವು ಸಕಲ ಜೀವಗಳೊಡನೆ ಇರುವ ಬಾಂಧವ್ಯದ ಹುಡುಕಾಟವೂ ಆಗಿಬಿಟ್ಟಿದೆ! ತನಗೆ ಅರಿವಿಲ್ಲದೆಯೇ! ಜೀವಿಗಳ ಚೇಷ್ಟೆಗಳೂ ಒಂದಾಗಿವೆ. ಜೀವಿಗಳೂ ಒಂದಾಗಿವೆ– ಈ ಹುಡುಕಾಟದಲ್ಲಿ! ಇಂಥದೊಂದು ಆಂತರಿಕವಾದ ‘ಹದ’ವೇ ಸರ್ವವ್ಯಾಪಿಯನ್ನು ಅರಿಯುವ ಹದವಾಗಿರಬೇಕು ಎಂದು ತೀವ್ರವಾಗಿ ಅನಿಸುತ್ತದೆ.

ಇದು ಅನುಭವದ ಮಾತು. ಬರಿಯ ಸಿದ್ಧಾಂತದ ಮಾತಲ್ಲ. ಸಿದ್ಧಾಂತವು ಎಷ್ಟೋಸಲ ಇನ್ನೊಬ್ಬರ ಮೇಲೆ ಹೇರುವುದಕ್ಕೆ ಬಳಕೆಯಾಗುತ್ತದೆ. ಸರ್ವವ್ಯಾಪಿಯನ್ನು ಹೇರ ಬೇಕೆ?

■ ತೋಷ

## ಮಾತೇ ಮುತ್ತು

★ ಕೊನೆಯಲ್ಲಿ ನಮಗೆ ನೆನಪಿನಲ್ಲಿ ಉಳಿಯುವುದು ನಮ್ಮ ಶತ್ರುಗಳ ಮಾತುಗಳಲ್ಲ; ಸ್ನೇಹಿತರ ಮೌನ ಮಾತ್ರ.

—ಮಾರ್ಟಿನ್ ಲೂಥರ್ ಕಿಂಗ್ ಜೂ.

★ ನೋವು ಅನಿವಾರ್ಯ. ಆದರೆ ನೋವಿನಿಂದ ನರಳುವುದು ಐಚ್ಛಿಕ.

—ಹರುಕಿ ಮುರಕಮಿ

★ ನೀವು ಏನಾಗಿಲ್ಲವೋ ಅದಕ್ಕಾಗಿ ಜನ ನಿಮ್ಮನ್ನು ಪ್ರೀತಿಸುವುದಕ್ಕಿಂತ, ನೀವು ಏನಾಗಿದ್ದೀರೋ ಅದಕ್ಕಾಗಿ ದ್ವೇಷಿಸುವುದು ಒಳ್ಳೆಯದು.

—ಆ್ಯಂಡ್ರೆ ಗೈಡ್

★ ಮದುವೆಗಳು ಮುರಿದು ಬೀಳುವುದಕ್ಕೆ ಗಂಡ– ಹೆಂಡಿರ ನಡುವಣ ಪ್ರೀತಿಯ ಕೊರತೆ ಕಾರಣವಲ್ಲ; ಸ್ನೇಹದ ಕೊರತೆ ಕಾರಣ.

—ಫ್ರೆಡ್ರಿಕ್ ನೀಷೆ

★ ಮೊದಲು ಚಾರಿತ್ರ್ಯವನ್ನು ವೃದ್ಧಿಸಿ. ನೀವು ಮಾಡಬೇಕಾದ ಮೊದಲ ಕೆಲಸವದು.

—ಸ್ವಾಮಿ ವಿವೇಕಾನಂದ

★ ನಿಮ್ಮನ್ನು ಯಾರಾದರೂ ಗಾಢವಾಗಿ ಪ್ರೀತಿಸಿದರೆ ನಿಮಗೆ ಶಕ್ತಿ ದೊರಕುತ್ತದೆ. ನೀವು ಯಾರನ್ನಾದರೂ ಗಾಢವಾಗಿ ಪ್ರೀತಿಸಿದರೆ ನಿಮಗೆ ಧೈರ್ಯ ಲಭಿಸುತ್ತದೆ.

—ಲಾವೊ ತ್ಸು

★ ಹೇಗೆ ಕುರುಡನಿಗೆ ಕನ್ನಡಿಯಿಂದ ಯಾವ ಪ್ರಯೋಜನವೂ ಇಲ್ಲವೋ ಹಾಗೆಯೇ ಮೂರ್ಖನಿಗೆ ಪುಸ್ತಕಗಳಿಂದ ಯಾವ ಪ್ರಯೋಜನವೂ ಇಲ್ಲ.

—ಚಾಣಕ್ಯ

★ ಹೆಣ್ಣನ್ನು ನಗಿಸಿದರೆ ಸಾಕು, ಆಕೆ ನಿಮಗಾಗಿ ಏನನ್ನಾದರೂ ಮಾಡುತ್ತಾಳೆ.

—ಮರ್ಲಿನ್ ಮನ್ರೋ

★ ಪರಿಪೂರ್ಣ ಗಂಡು ಇರುವುದಿಲ್ಲ. ಆದರೆ ನಿಮಗೆ ಪರಿಪೂರ್ಣ ಎನ್ನಿಸುವವರು ಇರುತ್ತಾರೆ. ಅವರನ್ನು ಅವರಿದ್ದಂತೆಯೇ ಪ್ರೀತಿಸಿ.

—ಬಾಬ್ ಮಾರ್ಲೆ

★ ಇತಿಹಾಸದ ಹಾದಿಯಲ್ಲಿ ಯಾವತ್ತೂ ಸತ್ಯ ಮತ್ತು ಪ್ರೇಮವೇ ಗೆದ್ದಿರುವುದು. ಸಂಚುಗಳು ಮತ್ತು ಹತ್ಯೆಗಳು ನಡೆದಿರುಬಹುದು. ಕೆಲವೊಮ್ಮೆ ಗೆಲುವು ಅದೃಶ್ಯವಾಗಿರಬಹುದು. ಆದರೆ ಅಂತಿಮ ಗೆಲುವು ಸತ್ಯ ಮತ್ತು ಪ್ರೇಮದ್ದೇ ಆಗಿದೆ.

—ಮಹಾತ್ಮ ಗಾಂಧಿ